# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1619
ಮಾನ್ಯ ಸದಸ್ಯರ ಹೆಸರು : ಶ್ರೀ ಗೋವಿಂದ ರಾಜು
ಉತ್ತರಿಸುವ ದಿನಾಂಕ : 19-12-2025
ಉತ್ತರಿಸುವ ಸಚಿವರು : ಮಾನ್ಯ ಸಮಾಜ ಕಲ್ಯಾಣ ಸಚಿವರು

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿರುವ ಎಸ್‌ಸಿ, ಎಸ್‌ಟಿ ಮತ್ತು ಒಬಿಸಿ ವಿದ್ಯಾರ್ಥಿ ನಿಲಯಗಳ ಸಂಖ್ಯೆ ಎಷ್ಟು ಹಾಗೂ ಸದರಿ ಸಂಖ್ಯೆ ಹಾಗೂ ವಸತಿ ಶಾಲೆಗಳ ಸಂಖ್ಯೆ ಮತ್ತು ವಸತಿ ಶಾಲೆಯಲ್ಲಿ ದಾಖಲಾಗಿರುವ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು: (ಮಾಹಿತಿಯನ್ನು ಪ್ರತ್ಯೇಕವಾಗಿ ನೀಡುವುದು) | ಸಮಾಜ ಕಲ್ಯಾಣ ಇಲಾಖೆಯ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಮತ್ತು ಪರಿಶಿಷ್ಟ ಪಂಗಡಗಳ ಕಲ್ಯಾಣ ಇಲಾಖೆಗಳಲ್ಲಿರುವ ವಿದ್ಯಾರ್ಥಿ ನಿಲಯಗಳ ಸಂಖ್ಯೆ ಮತ್ತು ವಸತಿ ಶಾಲೆಗಳ ಸಂಖ್ಯೆ ಹಾಗೂ ದಾಖಲಾತಿಯ ವಿವರವನ್ನು **ಅನುಬಂಧ-01**ರಲ್ಲಿ ಒದಗಿಸಿದೆ. |
| ಆ) | ರಾಜ್ಯದಲ್ಲಿರುವ ಅನೇಕ ವಸತಿ ಶಾಲೆಗಳಲ್ಲಿ ಮಂಚ, ಹಾಸಿಗೆ, ದಿಂಬು, ಜಮಖಾನ, ಸೋಲಾರ ವಾಟರ್ ಹಾಗೂ ಇನ್ನಿತರ ಮೂಲಸೌಕರ್ಯಗಳಿಂದ ವಿದ್ಯಾರ್ಥಿಗಳು ವಂಚಿತರಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ : ಬಂದಿದ್ದಲ್ಲಿ, ತೆಗೆದುಕೊಂಡ ಕ್ರಮವೇನು : | ಮೂಲಭೂತ ಸೌಕರ್ಯಗಳನ್ನು ಕಲ್ಪಿಸುವ ಸಂಬಂಧ ರಾಜ್ಯವಲಯದಿಂದ ನಿಲಯಗಳಿಗೆ ಅಗತ್ಯವಿರುವ ಸಾಮಗ್ರಿಗಳಾದ ಟೂ ಟಯರ್ ಕಾಟ್, ಸೋಲಾರ್ ವಾಟರ್ ಹೀಟರ್, ಡೈನಿಂಗ್ ಟೇಬಲ್, ಡೀಸೆಲ್ ಜನರೇಟರ್, ಕಾಯರ್ ಮ್ಯಾಟ್ರಸ್ ಮತ್ತು ಪಿಲ್ಲೋ, ಸಿಸಿಟಿವಿ ಕ್ಯಾಮರಾಗಳನ್ನು ಕೆಟಿಪಿಪಿ ನಿಯಮಾವಳಿಗಳನ್ವಯ ಇ-ಟೆಂಡರ್ ಮೂಲಕ ಅನುದಾನದ ಲಭ್ಯತೆಯ ಆಧಾರದ ಮೇಲೆ ಹಂತ ಹಂತವಾಗಿ ಖರೀದಿಸಿ ಪೂರೈಸಲಾಗುತ್ತಿದೆ.<br><br>ವಿದ್ಯಾರ್ಥಿ ನಿಲಯಗಳಲ್ಲಿ ಅಗತ್ಯವಿರುವ ಇತರೆ ಮೂಲಭೂತ ಸಾಮಗ್ರಿಗಳಾದ ಯುಪಿಎಸ್, ವಾಟರ್ ಪ್ಯೂರಿಫೈರ್, ಲೈಬ್ರರಿ ಬುಕ್ಸ್, ಕ್ರೀಡಾ ಸಾಮಗ್ರಿಗಳು, ಇನ್ಸಿನೇಟರ್, ಬೆಂಕಿ ನಂದಿಸುವ ಉಪಕರಣ, ಪಾತ್ರೆ ಪರಿಕರಗಳು ಹಾಗೂ ಇತರೆ ತುರ್ತು ಸಾಮಗ್ರಿಗಳ ಖರೀದಿಗಾಗಿ ಜಿಲ್ಲಾ ಮಟ್ಟಗಳಲ್ಲಿ ಅನುಷ್ಠಾನಗೊಳಿಸಲು 2022-23ನೇ ವರ್ಷದಲ್ಲಿ ಅನುದಾನವನ್ನು ಜಿಲ್ಲೆಗಳಿಗೆ ಬಿಡುಗಡೆ ಮಾಡಲಾಗಿರುತ್ತದೆ. |

<table>
<tr>
<td>ಇ)</td>
<td>ಕಳೆದ ಐದು ವರ್ಷಗಳಿಂದ ಸಮಾಜ ಕಲ್ಯಾಣ ಇಲಾಖೆಗೆ ಬಿಡುಗಡೆಯಾಗಿರುವ ಹಣವೆಷ್ಟು: ಬಿಡುಗಡೆಯಾಗಿರುವ ಹಣದಲ್ಲಿ ಎಸ್‌ಸಿ. ಎಸ್‌ಟಿ ಮತ್ತು ಒಬಿಸಿ ವಿದ್ಯಾರ್ಥಿಗಳ ಮೂಲಸೌಕರ್ಯಕ್ಕಾಗಿ ಖರ್ಚು ಮಾಡಿರುವ ಹಣವೆಷ್ಟು;</td>
<td>
ಕಳೆದ 05 ವರ್ಷಗಳಲ್ಲಿ ಸಮಾಜ ಕಲ್ಯಾಣ ಇಲಾಖೆಯ ವಿದ್ಯಾರ್ಥಿನಿಲಯಗಳಿಗೆ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಲು ರಾಜ್ಯವಲಯಕ್ಕೆ ಬಿಡುಗಡೆ ಮಾಡಲಾಗಿರುವ ಅನುದಾನದ ವಿವರಗಳು ಕೆಳಕಂಡಂತಿದೆ.
(ರೂ. ಕೋಟಿಗಳಲ್ಲಿ)
<table>
<tr><th>ಕ್ರ.ಸಂ</th><th>ವರ್ಷ</th><th>ಬಿಡುಗಡೆ</th><th>ಖರ್ಚು</th></tr>
<tr><td>1</td><td>2020-21</td><td>-</td><td>-</td></tr>
<tr><td>2</td><td>2021-22</td><td>-</td><td>-</td></tr>
<tr><td>3</td><td>2022-23</td><td>27.35</td><td>27.35</td></tr>
<tr><td>4</td><td>2023-24</td><td>18.00</td><td>18.00</td></tr>
<tr><td>5</td><td>2024-25</td><td>-</td><td>-</td></tr>
</table>
2020-21 ನೇ ಸಾಲಿನಿಂದ 2024-25 ನೇ ಸಾಲಿನವರಗೆ ಸಮಾಜ ಕಲ್ಯಾಣ ಇಲಾಖೆಗೆ ಬಿಡುಗಡೆಯಾಗಿರುವ ಅನುದಾನದ ವಿವರವನ್ನು ಈ ಕೆಳಕಂಡ ಪಟ್ಟಿಯಲ್ಲಿ ನೀಡಲಾಗಿರುತ್ತದೆ.
<table>
<tr><th>ವರ್ಷ</th><th>ಬಿಡುಗಡೆಯಾದ ಅನುದಾನ</th></tr>
<tr><td>2020-21</td><td>3276.08</td></tr>
<tr><td>2021-22</td><td>4057.10</td></tr>
<tr><td>2022-23</td><td>4956.33</td></tr>
<tr><td>2023-24</td><td>5117.55</td></tr>
<tr><td>2024-25</td><td>5969.48</td></tr>
</table>
</td>
</tr>
<tr>
<td>ಈ)</td>
<td>ವಸತಿ ಶಾಲೆಗಳಲ್ಲಿ ಕಳಪೆ ಆಹಾರ ನೀಡುತ್ತಿರುವುದು ಹಾಗೂ ಕಟ್ಟಡಗಳು ಶಿಥಿಲಾವಸ್ಥೆಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ:</td>
<td>
ಇಲಾಖೆಯ ಸರ್ಕಾರಿ ವಸತಿ ಶಾಲೆ ಮತ್ತು ಮೆಟ್ರಿಕ್ ಪೂರ್ವ ಹಾಗೂ ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳ ವಿದ್ಯಾರ್ಥಿಗಳಿಗೆ ಉತ್ತಮ ಗುಣಮಟ್ಟದ ಊಟೋಪಚಾರವನ್ನು ನೀಡಲು ಮೂರು ವಿಭಾಗವಾರು (ಕರಾವಳಿ, ದಕ್ಷಿಣ ಕನ್ನಡ ಮತ್ತು ಉತ್ತರ ಕನ್ನಡ) ಮೆನು ಚಾರ್ಟ್ ನಂತೆ ವಿದ್ಯಾರ್ಥಿಗಳಿಗೆ ಊಟೋಪಚಾರವನ್ನು ನೀಡಲಾಗುತ್ತಿದ್ದು, ಪ್ರಸ್ತುತ ಆಯುಕ್ತರ ಕಛೇರಿ ಸುತ್ತೋಲೆ ಸಂಖ್ಯೆ:SWD/EDU/ED4/5/2022/766227, ದಿನಾಂಕ:08-09-2025ರಲ್ಲಿ ಆಯಾ ಜಿಲ್ಲೆಗಳಲ್ಲಿಯೇ ಸಂಬಂಧಪಟ್ಟ ಜಿಲ್ಲೆಯ ಜಿಲ್ಲಾಪಂಚಾಯತ್ ಮುಖ್ಯಕಾರ್ಯನಿರ್ವಾಹಕ ಅಧಿಕಾರಿಗಳಿಂದ ಅನುಮೋದನೆ ಪಡೆದು ಜಿಲ್ಲಾವಾರು ಮೆನು ಚಾರ್ಟ್ ಸಿದ್ಧಪಡಿಸಿ ವಿದ್ಯಾರ್ಥಿಗಳ ದೈಹಿಕ ಮತ್ತು ಮಾನಸಿಕ ಹಿತದೃಷ್ಟಿಯಿಂದ CFTRI ರವರು ನೀಡಿರುವ Diet chart ನಲ್ಲಿ ನಮೂದು ಮಾಡಿರುವ ಆಹಾರ ಪದಾರ್ಥಗಳನ್ನು ಮತ್ತು ಸಿರಿಧಾನ್ಯಗಳನ್ನು ಆಹಾರ ಪದಾರ್ಥಗಳನ್ನು ಸೇರಿಸಿ ಪೌಷ್ಠಿಕಾಂಶಯುಕ್ತ ಆಹಾರವನ್ನು ನೀಡಲು ನಿರ್ದೇಶನ ನೀಡಲಾಗಿದೆ.
ಮುಂದುವರೆದು, ಸಮಾಜ ಕಲ್ಯಾಣ ಇಲಾಖೆಯ ವತಿಯಿಂದ ನಡೆಸುತ್ತಿರುವ ಡಾ.ಬಿ.ಆರ್.ಅಂಬೇಡ್ಕರ್ ವಸತಿ ಶಾಲೆಗಳ (01 ರಿಂದ 05ನೇ ತರಗತಿ) ಪೈಕಿ, ದಕ್ಷಿಣ ಕನ್ನಡ ಜಿಲ್ಲೆ, ಬಂಟ್ವಾಳ ತಾಲ್ಲೂಕು, ಜೋಡುಮಾರ್ಗ ಇಲ್ಲಿ ನಡೆಸುತ್ತಿರುವ ಡಾ.ಬಿ.ಆರ್ .ಅಂಬೇಡ್ಕರ್ ವಸತಿ ಶಾಲೆಯ ಕಟ್ಟಡವು ಶಿಥಿಲಾವಸ್ಥೆಯಲ್ಲಿರುವುದು ಕಂಡು ಬಂದಿದ್ದು, ಸದರಿ ಶಿಥಿಲಗೊಂಡ ಕಟ್ಟಡವನ್ನು ನೆಲಸಮಗೊಳಿಸಿ ಹೊಸ ಕಟ್ಟಡ ನಿರ್ಮಾಣ ಮಾಡಲು 2024-25ನೇ ಸಾಲಿನಲ್ಲಿ ಮಂಜೂರಾತಿ ನೀಡಲಾಗಿರುತ್ತದೆ.
</td>
</tr>
</table>

| | | |
|---|---|---|
| **ಉ)** | ಸರ್ಕಾರ ಘೋಷಿಸಿರುವ ಮೂಲಸೌಕರ್ಯವನ್ನು ನೀಡುತ್ತಿಲ್ಲ ಎಂಬುದು ಒಂದೆಡೆಯಾದರೆ, ಇನ್ನೊಂದು ಕಡೆ ವಸತಿ ನಿಲಯಗಳಲ್ಲಿ ಅಕ್ರಮವಾಸ, ಗೂಂಡಾಗಿರಿ, ಖರೀದಿ ಟೆಂಡರ್‌ನಲ್ಲಿ ಲಕ್ಷಾಂತರ ರೂಪಾಯಿ ಭ್ರಷ್ಟಾಚಾರ ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: ಇವುಗಳ ಉಸ್ತುವಾರಿಯನ್ನು ಯಾವ ಅಧಿಕಾರಿಗೆ ವಹಿಸಲಾಗಿದೆ? | ಮೂಲಭೂತ ಸೌಕರ್ಯಗಳನ್ನು ಕಲ್ಪಿಸುವ ಸಂಬಂಧ ರಾಜ್ಯವಲಯದಿಂದ ನಿಲಯಗಳಿಗೆ ಅಗತ್ಯವಿರುವ ಸಾಮಗ್ರಿಗಳಾದ ಟೂ ಟಯರ್ ಕಾಟ್, ಸೋಲಾರ್ ವಾಟರ್ ಹೀಟರ್, ಡೈನಿಂಗ್ ಟೇಬಲ್, ಡೀಸೆಲ್ ಜನರೇಟರ್, ಕಾಯರ್ ಮ್ಯಾಟ್ರಸ್ ಮತ್ತು ಪಿಲ್ಲೋ, ಸಿಸಿಟಿವಿ ಕ್ಯಾಮರಾಗಳನ್ನು ಕೆಟಿಪಿಪಿ ನಿಯಮಾವಳಿಗಳನ್ವಯ ಇ-ಟೆಂಡರ್ ಮೂಲಕ ಅನುದಾನದ ಲಭ್ಯತೆಯ ಆಧಾರದ ಮೇಲೆ ಹಂತ ಹಂತವಾಗಿ ಖರೀದಿಸಿ ಪೂರೈಸಲಾಗುತ್ತಿದೆ.<br><br>ವಿದ್ಯಾರ್ಥಿ ನಿಲಯಗಳಲ್ಲಿ ಅಗತ್ಯವಿರುವ ಇತರೆ ಮೂಲಭೂತ ಸಾಮಗ್ರಿಗಳಾದ ಯುಪಿಎಸ್, ವಾಟರ್ ಪ್ಯೂರಿಫೈರ್, ಲೈಬ್ರರಿ ಬುಕ್ಸ್, ಕ್ರೀಡಾ ಸಾಮಗ್ರಿಗಳು, ಇನ್ಸಿನೇಟರ್, ಬೆಂಕಿ ನಂದಿಸುವ ಉಪಕರಣ, ಪಾತ್ರೆ ಪರಿಕರಗಳು ಹಾಗೂ ಇತರೆ ತುರ್ತು ಸಾಮಗ್ರಿಗಳ ಖರೀದಿಗಾಗಿ ಜಿಲ್ಲಾ ಮಟ್ಟಗಳಲ್ಲಿ ಅನುಷ್ಠಾನಗೊಳಿಸಲು 2022-23ನೇ ವರ್ಷದಲ್ಲಿ ಅನುದಾನವನ್ನು ಜಿಲ್ಲೆಗಳಿಗೆ ಬಿಡುಗಡೆ ಮಾಡಲಾಗಿರುತ್ತದೆ.<br><br>ವಿದ್ಯಾರ್ಥಿಗಳ ಸಮರ್ಪಕ ನಿರ್ವಹಣೆ ಕುರಿತಂತೆ ಕೈಗೊಂಡ ಕ್ರಮಗಳ ಬಗ್ಗೆ ಮಾಹಿತಿಯನ್ನು **ಅನುಬಂಧ – 2**ರಲ್ಲಿ ನೀಡಿದೆ. |

**ಸಕಇ 977 ಪಕವಿ 2025**

**(ಡಾ: ಹೆಚ್.ಸಿ.ಮಹದೇವಪ್ಪ)**
**ಸಮಾಜ ಕಲ್ಯಾಣ ಸಚಿವರು**

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:1619ಗೆ **ಅನುಬಂಧ-01**

## ಸಮಾಜ ಕಲ್ಯಾಣ ಇಲಾಖೆ
## ವಿದ್ಯಾರ್ಥಿ ನಿಲಯಗಳ ಮತ್ತು ದಾಖಲಾತಿ ಪಡೆದಿರುವ ವಿದ್ಯಾರ್ಥಿಗಳ ವಿವರ

| ಕ್ರ.ಸಂ | ವಿವರ | ಒಟ್ಟು | ದಾಖಲಾತಿ |
|---|---|---|---|
| 01 | ಮೆಟ್ರಿಕ್ ಪೂರ್ವ ವಿ ನಿಲಯಗಳು | 1215 | 98489 |
| 02 | ಮೆಟ್ರಿಕ್ ನಂತರ ವಿ ನಿಲಯಗಳು | 719 | 118202 |
| 03 | ದೀನದಯಾಳ್ ಉಪಾದ್ಯಾಯ ವಿ ನಿಲಯಗಳು | 4 | 400 |
| | **ಒಟ್ಟು** | **1938** | **217091** |

## ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ

| ಕ್ರ.ಸಂ | ವಿವರ | ಒಟ್ಟು | ದಾಖಲಾತಿ |
|---|---|---|---|
| 01 | ಮೆಟ್ರಿಕ್ ಪೂರ್ವ ವಿ ನಿಲಯಗಳು | 1245 | 63080 |
| 02 | ಮೆಟ್ರಿಕ್ ನಂತರ ವಿ ನಿಲಯಗಳು | 1414 | 160897 |
| | **ಒಟ್ಟು** | **2659** | **223977** |

## ಪರಿಶಿಷ್ಟ ಪಂಗಡಗಳ ಕಲ್ಯಾಣ ಇಲಾಖೆ

ಪರಿಶಿಷ್ಟ ಪಂಗಡಗಳ ಕಲ್ಯಾಣ ಇಲಾಖಾವತಿಯಿಂದ **135** ಮೆಟ್ರಿಕ್ ಪೂರ್ವ ಹಾಗೂ **169** ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳು ಕಾರ್ಯನಿರ್ವಹಿಸುತ್ತಿದ್ದು, ಒಟ್ಟು **35387** ವಿದ್ಯಾರ್ಥಿ ಪ್ರವೇಶ ಪಡೆದಿರುತ್ತಾರೆ.

ಸಮಾಜ ಕಲ್ಯಾಣ ಇಲಾಖೆಯ ವತಿಯಿಂದ 67 ಡಾ.ಬಿ.ಆರ್.ಅಂಬೇಡ್ಕರ್ (1-5ನೇ ತರಗತಿ) ಸರ್ಕಾರಿ ವಸತಿ ಶಾಲೆಗಳನ್ನು ನಿರ್ವಹಿಸಲಾಗುತ್ತಿದ್ದು, ಸದರಿ ವಸತಿ ಶಾಲೆಗಳಲ್ಲಿ ದಾಖಲಾಗಿರುವ ವಿದ್ಯಾರ್ಥಿಗಳ ವಿವರ ಕೆಳಕಂಡಂತಿದೆ.

| ಕ್ರ.ಸಂ | ವಿವರ | ಒಟ್ಟು | ದಾಖಲಾತಿ |
|---|---|---|---|
| 01 | ಡಾ.ಬಿ.ಆರ್.ಅಂಬೇಡ್ಕರ್ (1-5ನೇ ತರಗತಿ) ಸರ್ಕಾರಿ ವಸತಿ ಶಾಲೆ | 67 | 6694 |

## ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ

ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಅಧೀನದಲ್ಲಿ 874 (ಪರಿಶಿಷ್ಟ ಜಾತಿ -539, ಪರಿಶಿಷ್ಟ ವರ್ಗ-156 ಹಾಗೂ ಹಿಂದುಳಿದ ವರ್ಗ-179) ವಸತಿ ಮೊರಾರ್ಜಿ ದೇಸಾಯಿ/ರಾಣಿ ಚೆನ್ನಮ್ಮ/ ಅಟಲ್ ಬಿಹಾರಿ ವಾಜಪೇಯಿ/ನವೋದಯ ವಸತಿ ಶಾಲೆಗಳು ಮಂಜೂರಾಗಿ ಕಾರ್ಯನಿರ್ವಹಿಸುತ್ತಿವೆ.

ಸದರಿ ವಸತಿ ಶಾಲೆ/ಕಾಲೇಜುಗಳಲ್ಲಿ 217970 ವಿದ್ಯಾರ್ಥಿಗಳು ವ್ಯಾಸಂಗ ಮಾಡಲು ಅವಕಾಶ ಕಲ್ಪಿಸಲಾಗಿದ್ದು, 2025-26ನೇ ಸಾಲಿನಲ್ಲಿ ಪ್ರಸ್ತುತ 200213 ವಿದ್ಯಾರ್ಥಿಗಳು ದಾಖಲಾಗಿರುತ್ತಾರೆ.

**ಮಾನ್ಯ ವಿಧಾನ ಪರಿಷತ್ ಸದಸ್ಯರಾದ ಶ್ರೀ ಗೋವಿಂದ ರಾಜು(ವಿಧಾನಸಭೆಯಿಂದ ಚುನಾಯಿತರಾದವರು) ರವರ ಚುಕ್ಕೆಗುರುತಿಲ್ಲದ ಪ್ರಶ್ನೆ ಸಂಖ್ಯೆ 1371(1619)ಕ್ಕೆ ಅನುಬಂಧ - 2**

- ಇಲಾಖೆಯ ಸರ್ಕಾರಿ ವಸತಿ ಶಾಲ ಮತ್ತು ಮೆಟ್ರಿಕ್ ಪೂರ್ವ ಹಾಗೂ ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳ ವಿದ್ಯಾರ್ಥಿಗಳಿಗೆ ಉತ್ತಮ ಗುಣಮಟ್ಟದ ಊಟೋಪಚಾರವನ್ನು ನೀಡಲು ಮೂರು ವಿಭಾಗವಾರು (ಕರಾವಳಿ, ದಕ್ಷಿಣ ಕನ್ನಡ ಮತ್ತು ಉತ್ತರ ಕನ್ನಡ) ಮೆನು ಚಾರ್ಟ್ ನಂತೆ ವಿದ್ಯಾರ್ಥಿಗಳಿಗೆ ಊಟೋಪಚಾರವನ್ನು ನೀಡಲಾಗುತ್ತಿದ್ದು, ಪ್ರಸ್ತುತ ಈ ಕಛೇರಿ ಸುತ್ತೋಲೆ ಸಂಖ್ಯೆ:SWD/EDU/ED4/5/2022/766227, ದಿನಾಂಕ:08-09-2025ರಲ್ಲಿ ಆಯಾ ಜಿಲ್ಲೆಗಳಲ್ಲಿಯೇ ಸಂಬಂಧಪಟ್ಟ ಜಿಲ್ಲೆಯ ಜಿಲ್ಲಾಪಂಚಾಯತ್ ಮುಖ್ಯಕಾರ್ಯನಿರ್ವಾಹಕ ಅಧಿಕಾರಿಗಳಿಂದ ಅನುಮೋದನೆ ಪಡೆದು ಜಿಲ್ಲಾವಾರು ಮೆನು ಸಿದ್ಧಪಡಿಸಿ ವಿದ್ಯಾರ್ಥಿಗಳ ದೈಹಿಕ ಮತ್ತು ಮಾನಸಿಕ ಹಿತದೃಷ್ಟಿಯಿಂದ CFTRI ರವರು ನೀಡಿರುವ Diet chart ನಲ್ಲಿ ನಮೂದು ಮಾಡಿರುವ ಆಹಾರ ಪದಾರ್ಥಗಳನ್ನು ಮತ್ತು ಸಿರಿಧಾನ್ಯಗಳನ್ನು ಆಹಾರ ಪದಾರ್ಥಗಳನ್ನು ಸೇರಿಸಿ ಪೌಷ್ಟಿಕಾಂಶಯುಕ್ತ ಆಹಾರವನ್ನು ನೀಡಲು ನಿರ್ದೇಶನ ನೀಡಲಾಗಿದೆ.
- ಸರ್ಕಾರದ ಆದೇಶ ಸಂಖ್ಯೆ: ಸಕಇ 55 ಪಕವಿ 2023 ಬೆಂಗಳೂರು ದಿ: 05-05-2023 ರಲ್ಲಿ ಪ್ರತಿ ನಿಲಯದಲ್ಲಿ ವಿದ್ಯಾರ್ಥಿಗಳ ಸಹಭಾಗಿತ್ವದಲ್ಲಿಯೇ Mess Committee ಅನ್ನು ರಚಿಸಿ, ಗುಣಮಟ್ಟ ಕಾಯ್ದುಕೊಳ್ಳಲಾಗಿರುತ್ತದೆ. ಹಾಗೂ ವಿದ್ಯಾರ್ಥಿನಿಲಯಗಳಲ್ಲಿನ ಶೌಚಾಲಯ ಸ್ವಚ್ಛತೆ ಹಾಗೂ ನೈರ್ಮಲ್ಯದ ಕುರಿತಾಗಿ Sanitation committee ಯನ್ನು ರಚಿಸಲಾಗಿರುತ್ತದೆ.
- ಈ ಕಛೇರಿ ಆದೇಶ ಸಂಖ್ಯೆ:ಸಕನಿ/ಇಡಿ-4/2022-23, ದಿನಾಂಕ:08-01-2024ರಲ್ಲಿ ಇಲಾಖೆಯ ಡಾ.ಬಿ.ಆರ್.ಅಂಬೇಡ್ಕರ್ ಸರ್ಕಾರಿ ವಸತಿ ಶಾಲೆ ಹಾಗೂ ಮೆಟ್ರಿಕ್ ಪೂರ್ವ ಮತ್ತು ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳಲ್ಲಿನ ವಿದ್ಯಾರ್ಥಿಗಳಿಗೆ ಶುಚಿ ರುಚಿಯಾದ ಮತ್ತು ಪೌಷ್ಟಿಕ ಆಹಾರವನ್ನು ನೀಡುವ ಕುರಿತು ಹಾಗೂ ವಿದ್ಯಾರ್ಥಿನಿಲಯಗಳ ಸಮರ್ಪಕ ನಿರ್ವಹಣೆ ಮಾಡಲು ಜಿಲ್ಲಾಮಟ್ಟಗಳಲ್ಲಿ ವಾರ್ಡನ್, ಅಡುಗೆಯವರು ಮತ್ತು ಅಡುಗೆ ಸಹಾಯಕರು ಹಾಗೂ ರಾತ್ರಿ ಕಾವಲುಗಾರರು (ಹೊರಸಂಪನ್ಮೂಲ ನೌಕರರು ಸೇರಿದಂತೆ)ಗಳಿಗೆ ಸ್ವಚ್ಛತೆ ಹಾಗೂ ರುಚಿಯಾದ ಅಡುಗೆ ತಯಾರಿಸುವ ಕುರಿತಂತೆ ತರಬೇತಿ ಕಾರ್ಯಾಗಾರವನ್ನು ಏರ್ಪಡಿಸಲಾಗಿರುತ್ತದೆ. ಈ ಸಂಬಂಧ ಪ್ರತಿ ಜಿಲ್ಲೆಗೆ ರೂ.50,000/- ಗಳಂತೆ ಒಟ್ಟು 31 ಜಿಲ್ಲೆಗಳಿಗೆ ಅನುದಾನ ಬಿಡುಗಡೆ ಮಾಡಿ ಆದೇಶಿಸಲಾಗಿದೆ.
- ಈ ಕಛೇರಿ ಆದೇಶ ಸಂಖ್ಯೆ:ಸಕನಿ/ಇಡಿ-4/938298/2022-23ರಲ್ಲಿ ಇಲಾಖೆಯ ಸರ್ಕಾರಿ ವಸತಿ ಶಾಲೆ ಮತ್ತು ಮೆಟ್ರಿಕ್ ಪೂರ್ವ ಮತ್ತು ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳಲ್ಲಿ ಶುಚಿತ್ವ ಹಾಗೂ ನೈರ್ಮಲ್ಯ ಮತ್ತು ರುಚಿಯಾದ ಊಟ-ತಿಂಡಿ ತಯಾರಿಸುವ ಕುರಿತು International institute of Hotel Management Bangalore ರವರಿಂದ ಬೆಂಗಳೂರು ವಿಭಾಗದ ಎಲ್ಲಾ ಜಿಲ್ಲೆಗಳಲ್ಲಿ ತರಬೇತಿ ನೀಡಲಾಗಿದ್ದು, ಉಳಿದ ಎಲ್ಲಾ ಜಿಲ್ಲೆಗಳಿಗೂ ಇದೇ ಮಾದರಿ ಪ್ರತಿಷ್ಠಿತ ಸಂಸ್ಥೆಗಳಿಂದ ತರಬೇತಿ ನೀಡಲಾಗಿರುತ್ತದೆ.
- ಸರ್ಕಾರದ ಆದೇಶ ಸಂಖ್ಯೆ: ಸಕಇ 738 ಪಕವಿ 2024, ದಿನಾಂಕ: 30-10-2024ರಲ್ಲಿ ಇಲಾಖೆಯ ಡಾ.ಬಿ.ಆರ್.ಅಂಬೇಡ್ಕರ್ ಸರ್ಕಾರಿ ವಸತಿ ಶಾಲೆ ಹಾಗೂ ಮೆಟ್ರಿಕ್ ಪೂರ್ವ

ಮತ್ತು ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳಿಗೆ ಆಹಾರ ಪದಾರ್ಥ ಮತ್ತು ಇತರೆ
ಸಾಮಗ್ರಿಗಳನ್ನು ಸರಬರಾಜು ಮಾಡಲು 2024-25ನೇ ಸಾಲಿನಿಂದ ಜಿಲ್ಲಾಮಟ್ಟದಲ್ಲಿ ಪ್ರತಿ
ಜಿಲ್ಲೆಯನ್ನು ಘಟಕವನ್ನಾಗಿಸಿ ಪ್ರತಿ 02 ವರ್ಷಗಳಿಗೊಮ್ಮೆ ಕಡ್ಡಾಯವಾಗಿ ಟೆಂಡರ್
ಕರೆಯುವಂತೆ ಪರಿಷ್ಕೃತ ಮಾರ್ಗಸೂಚಿಯನ್ನು ಹೊರಡಿಸಿ ಆದೇಶಿಸಿದೆ.

- ಸರ್ಕಾರದ ಆದೇಶ ಸಂಖ್ಯೆ: ಸಕಇ 97 ಪಕವಿ 2023, ದಿನಾಂಕ : 28-07-2023ರಲ್ಲಿ ಟೆಂಡರ್
ಮೂಲಕ ಪಡೆಯಲಾಗುವ ಆಹಾರ ಸಾಮಾಗ್ರಿಗಳ ಗುಣಮಟ್ಟ ಕಾಯ್ದುಕೊಳ್ಳುವಂತೆಯೂ
ಹಾಗೂ Freak Rate ನಮೂದಿಸುವ ಗುತ್ತಿಗೆದಾರರ ಬಿಡ್ ಅನ್ನು ನಿಯಮಾನುಸಾರ
ತಿರಸ್ಕರಿಸುವಂತೆ ಸೂಚಿಸಲಾಗಿರುತ್ತದೆ.

- ಸರ್ಕಾರದ ಆದೇಶ ಸಂಖ್ಯೆ:ಸಕಇ 260 ಎಂಡಿಎಸ್ 2024, ದಿನಾಂಕ:06-01-2025 ರಲ್ಲಿ
ಸಮಾಜ ಕಲ್ಯಾಣ ಇಲಾಖೆಯ ವಸತಿ ಶಾಲಾ / ಕಾಲೇಜುಗಳು ಮತ್ತು ವಸತಿ ನಿಲಯಗಳ
ವಿದ್ಯಾರ್ಥಿಗಳಿಗೆ ಮೆನು ಪ್ರಕಾರ ಸಕಾಲದಲ್ಲಿ ಊಟದ ಗುಣಮಟ್ಟ ಮತ್ತು ಸ್ಥಿರತೆಯ ಬಗ್ಗೆ
ಪಾರದರ್ಶಕತೆ ಮತ್ತು ಸಾರ್ವಜನಿಕ ಜಾಗೃತಿಯನ್ನು ಖಚಿತಪಡಿಸಿಕೊಳ್ಳಲು ಬೆಳಗಿನ
ಉಪಹಾರ, ಮಧ್ಯಾಹ್ನ ಮತ್ತು ರಾತ್ರಿ ಊಟಕ ದೈನಂದಿನ ಫೋಟೋಗಳನ್ನು X (Formaly
Twitter) ನಲ್ಲಿ Post ಮಾಡಲು ಮಾರ್ಗಸೂಚಿಗಳನ್ನು ಹೊರಡಿಸಿ ಸರ್ಕಾರದ ಅಪರ
ಮುಖ್ಯ ಕಾರ್ಯದರ್ಶಿ ಹಾಗೂ ಅಭಿವೃದ್ಧಿ ಆಯುಕ್ತರು ಕರ್ನಾಟಕ ಸರ್ಕಾರ ರವರ
ಅಧ್ಯಕ್ಷತೆಯಲ್ಲಿ ಇಲಾಖಾ ಅಧಿಕಾರಿಗಳನ್ನೊಳಗೊಂಡ ಸಮಿತಿಯನ್ನು ರಚಿಸಿ ಆದೇಶಿಸಿದೆ.

- ಸರ್ಕಾರದ ಅಧಿಕೃತ ಜ್ಞಾಪನ ಸಂಖ್ಯೆ: SWD 198 RI 2022, ದಿನಾಂಕ: 18-02-2025
ರನ್ವಯ ಪ್ರತಿ ಜಿಲ್ಲೆಗೆ ರಾಜ್ಯ ಮಟ್ಟದ ಅಧಿಕಾರಿಗಳನ್ನು ನೋಡಲ್ ಅಧಿಕಾರಿಗಳನ್ನಾಗಿ
ನಿಯೋಜನೆ ಆದೇಶಿಸಲಾಗಿರುತ್ತದೆ.

- ಸರ್ಕಾರದ ಆದೇಶ ಸಂಖ್ಯೆ SWD/EDU/ED4/80/2023 C-1161067 ದಿನಾಂಕ:15-09-2023
ರಲ್ಲಿ ಸಮಾಜ ಕಲ್ಯಾಣ ಇಲಾಖೆಯ ಅಧೀನದಲ್ಲಿ ಬರುವ ವಿದ್ಯಾರ್ಥಿ ನಿಲಯಗಳಿಗೆ ಉಪ
ವಿಭಾಗಾಧಿಕಾರಿಗಳು ಪ್ರತಿ ಮಾಹೆಯಲ್ಲಿ ಕನಿಷ್ಠ ಒಂದು ಬಾರಿ ಹಾಗೂ ತಾಲ್ಲೂಕಿನ
ತಹಶೀಲ್ದಾರ್‌ರು ಪ್ರತಿ ಮಾಹೆಯಲ್ಲಿ ಕನಿಷ್ಠ 2 ಬಾರಿ ಅನಿರೀಕ್ಷಿತ ಭೇಟಿ ನೀಡಿ ವರದಿ
ಮಾಡುವಂತೆ ಆದೇಶಿಸಿದೆ.

- ಈ ಕಛೇರಿ ಸುತ್ತೋಲೆ ಸಂಖ್ಯೆ: SWD/ SCHC/ SC/ 23/ 2023/ 1184131) ದಿನಾಂಕ: 19-09-
2023 ರಲ್ಲಿ ಇಲಾಖೆಯ ಡಾ.ಬಿ.ಆರ್.ಅಂಬೇಡ್ಕರ್ ಸರ್ಕಾರಿ ವಸತಿ ಶಾಲೆ ಹಾಗೂ ಮೆಟ್ರಿಕ್
ಪೂರ್ವ ಮತ್ತು ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳಲ್ಲಿ ಸಿದ್ಧಪಡಿಸಲಾಗುತ್ತಿರುವ
ಆಹಾರದ ಗುಣಮಟ್ಟ ಕಾಯ್ದುಕೊಳ್ಳುವ ಸಂಬಂಧ Taste Register (ರುಚಿ ಪರಿಶೀಲನಾ
ವಹಿ)ಯನ್ನು ನಿರ್ವಹಿಸುವಂತೆ ಸೂಚಿಸಿದೆ.

- ಸಮಾಜ ಕಲ್ಯಾಣ ಇಲಾಖೆಯ ಸುತ್ತೋಲೆ ಸಂಖ್ಯೆ.SWD/EDU/ED7/ 20/2023/1065640
ದಿನಾಂಕ:07-10-2023ರಲ್ಲಿ ಇಲಾಖಾ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಎಲ್ಲಾ
ವಿದ್ಯಾರ್ಥಿನಿಲಯ ಹಾಗೂ ವಸತಿ ಶಾಲೆಗಳಿಗೆ ಮಾಹೆಯಾನ ಸರಬರಾಜು ಆಗುತ್ತಿರುವ
ಆಹಾರ ಪದಾರ್ಥಗಳ ಸಂಬಂಧ, ಪ್ರತಿ ಮಾಹೆ ಸರಬರಾಜು ಆಗುತ್ತಿರುವ ಆಹಾರ
ಪದಾರ್ಥಗಳ ಮಾದರಿಯನ್ನು ಸಂರಕ್ಷಿಸುವ ಬಗ್ಗೆ ಕ್ರಮವಹಿಸಲಾಗಿದೆ. ಹಾಗೂ
ಮಾಹೆಯಾನ ಸರಬರಾಜಾಗುತ್ತಿರುವ ಆಹಾರ ಪದಾರ್ಥಗಳ ಸಂಬಂಧ, ಪ್ರತಿ ಮಾಹೆ
ಸರಬರಾಜಾಗುತ್ತಿರುವ ಆಹಾರ ಪದಾರ್ಥಗಳ ಮಾದರಿಗಳನ್ನು ಪಡೆದು ಸಂರಕ್ಷಿಸಿಡುವ
ಬಗ್ಗೆ ಹೊರಡಿಸಲಾಗಿರುವ ಎಲ್ಲಾ ಮಾರ್ಗಸೂಚಿಗಳನ್ನು ಕಡ್ಡಾಯವಾಗಿ ಪಾಲಿಸಿ,
ಇಲಾಖಾ ವ್ಯಾಪ್ತಿಯ ನಿಲಯಗಳಿಗೆ ಉತ್ತಮ ಗುಣಮಟ್ಟದ ಆಹಾರ ಸಾಮಗ್ರಿಗಳು

ಸರಬರಾಜು ಆಗುವಂತೆ ನೋಡಿಕೊಳ್ಳುವುದು ಸಂಬಂಧಪಟ್ಟ ಜಿಲ್ಲೆಯ ಜಿಲ್ಲಾ ಹಾಗೂ ತಾಲ್ಲೂಕು ಅಧಿಕಾರಿಗಳ ಜವಾಬ್ದಾರಿಯಾಗಿರುತ್ತದೆ. ಒಂದು ವೇಳೆ ಸದರಿ ಮಾರ್ಗಸೂಚಿಗಳನ್ನು ಉಲ್ಲಂಘಿಸಿದಲ್ಲಿ ಸಂಬಂಧಪಟ್ಟ ಜಿಲ್ಲೆಯ ಜಂಟಿ / ಉಪನಿರ್ದೇಶಕರು ಹಾಗೂ ತಾಲ್ಲೂಕು ಮಟ್ಟದ ಸಹಾಯಕ ನಿರ್ದೇಶಕರ ಮೇಲೆ ಶಿಸ್ತು ಕ್ರಮ ತೆಗೆದುಕೊಳ್ಳಲಾಗುವುದು.

- ಸರ್ಕಾರದ ಆದೇಶ ಸಂಖ್ಯೆ:ಸಕಇ 914 ಪಕವಿ 2024, ದಿನಾಂಕ:02-01-2025 ರಲ್ಲಿ ಇಲಾಖೆಯ ವಿದ್ಯಾರ್ಥಿನಿಲಯಗಳನ್ನು ಸಮರ್ಪಕ ಕಾರ್ಯ ನಿರ್ವಹಣೆಗೆ ಬೆಂಬಲ ಹಾಗೂ ಮಾರ್ಗದರ್ಶನವನ್ನು ನೀಡುವ ಸಲುವಾಗಿ ತಾಲ್ಲೂಕಿನ ಶಾಲೆಗಳ ಮುಖ್ಯೋಪಾಧ್ಯಾಯರು, ಗ್ರಾಮಪಂಚಾಯತ್ PDO, ಪುರಸಭೆ / ನಗರ ಸಭೆ ಮುಖ್ಯಾಧಿಕಾರಿಗಳು, ಕ್ಲಸ್ಟರ್ ಸಂಪನ್ಮೂಲಾಧಿಕಾರಿ ಮತ್ತು ತಾಲ್ಲೂಕು / ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿಗಳು ಹಾಗೂ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಅಧಿಕಾರ ಸದಸ್ಯರುಗಳು ಸೇರಿದಂತೆ ಪ್ರತಿ ವಿದ್ಯಾರ್ಥಿನಿಲಯದಲ್ಲಿ **"ವಿದ್ಯಾರ್ಥಿನಿಲಯ ನಿರ್ವಹಣಾ ಸಮಿತಿ"** ಯನ್ನು ರಚಿಸಿ ಆದೇಶಿಸಿದೆ.
- ಈ ಕಛೇರಿ ಆದೇಶ ಸಂಖ್ಯೆ: ಸಕನಿ/ಇಡಿ-4/ಸಿಆರ್- 1691549/2024-25 ದಿನಾಂಕ:28-10-2025ರಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಸರ್ಕಾರಿ ವಸತಿ ಶಾಲ ಹಾಗೂ ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯಗಳ ವಿದ್ಯಾರ್ಥಿಗಳಿಗೆ ಪೌಷ್ಠಿಕಾಂಶ ಪುಡಿಯನ್ನು (Nutrition Powder) ನೀಡಲಾಗುತ್ತಿದೆ.
- ಸರ್ಕಾರದ ಆದೇಶ ಸಂಖ್ಯೆ:ಸಕಇ 287 ಪಕವಿ 2024, ದಿನಾಂಕ 28-11-2024ರಲ್ಲಿ ಇಲಾಖೆಯ ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳ ನಿಲಯಾರ್ಥಿಗಳಿಗೆ ಹೆಚ್ಚುವರಿಯಾದ ರೂ.100/-ಗಳಲ್ಲಿ ವಾರದಲ್ಲಿ 04 ದಿನ ತಲಾ ಒಂದು ಮೊಟ್ಟೆಯಂತೆ ಪ್ರತಿ ನಿಲಯಾರ್ಥಿಗಳಿಗೆ ವಿತರಿಸಲು ಆದೇಶಿಸಿದೆ.
- ಈ ಕಛೇರಿ ಆದೇಶ ಸಂಖ್ಯೆ.SWD/EDU/ED6/48/2023/1009904, ದಿನಾಂಕ:29-07-2025ರಲ್ಲಿ ಸಮಾಜ ಕಲ್ಯಾಣ ಇಲಾಖೆಯ ಮೆಟ್ರಿಕ್ ಪೂರ್ವ ಮತ್ತು ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳು ಹಾಗೂ 1 ರಿಂದ 5ನೇ ತರಗತಿ ವರೆಗಿನ ಡಾ.ಬಿ.ಆರ್.ಅಂಬೇಡ್ಕರ್ ವಸತಿ ಶಾಲೆಗಳಲ್ಲಿ ಅನಧಿಕೃತ ವ್ಯಕ್ತಿಗಳನ್ನು ನಿರ್ಬಂಧಿಸುವ ಹಾಗೂ ಇಲಾಖೆಯ ವಿದ್ಯಾರ್ಥಿನಿಲಯಗಳಲ್ಲಿ ಕಾನೂನು ಬಾಹಿರ ಚಟುವಟಿಕೆಗಳಿಗೆ ಕಡಿವಾಣ ಹಾಕಲು ಸೂಕ್ತ ಮಾರ್ಗಸೂಚಿಗಳನ್ನು ಹೊರಡಿಸಿ ಆದೇಶಿಸಲಾಗಿದೆ.

ಆಯುಕ್ತರ ಪರವಾಗಿ,
ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು